

## ಎಷ್ಟು ಸುದೀರ್ಘ

ಹರಿವ ನದಿಯಿದು
ಸರ್ಪ ಮೈಯಿ,
ಬಿಸಿಲು ಬಿದ್ದು
ಈ ಮೈಯ ಮೇಲೆ
ಹೊಳೆಹೊಳೆದು ಕಾಣುತ್ತದೆ
ಜೀವದ್ರವ್ಯ.

ನನ್ನ ಪುಟ್ಟ ಕಣ್ಣುಗಳನ್ನು
ಪೂರಾ ಇದರೊಳಗೆ ಅದ್ದುತ್ತೇನೆ,
ನಿಧಾನಕ್ಕೆ ಆವರಿಸುವ ಕತ್ತಲು
ಕಣ್ಣುಗಳ ತುಂಬುತ್ತದೆ.

ಆಗ
ಬದುಕಿನ ಹೊಸ ಸುಖವೊಂದು
ನನ್ನಿಡಿಯಾಗಿ ತುಂಬಿಕೊಂಡು
ಆಹಾ!
ಈ ಒಂದು ಕ್ಷಣವೇ
ಎಷ್ಟು ಸುದೀರ್ಘವೆನಿಸಿದೆ!

ಜೀವಮಾನವೆಂದರೆ ಇದೇ ಏನು
ನಿನ್ನೆ ನಾಳೆಗಳ ಹೊಳೆಯಲ್ಲಿ
ಈ ಕ್ಷಣದ ಹರಿವು?

## ಈ ಆಟವೇ

ಹೆಣೆದು ಒಂದನ್ನೊಂದು
ಬಿಗಿದು ಬೆಸುಗೆ
ಶಬ್ದವು ಅರ್ಥವಾಗಿ
ಅರ್ಥಕ್ಕೆ ಅನುಭವ ಕೂಡಿ
ಕವಿತೆಯೆಂಬುದು
ನಾಗದಂಪತಿಯ ಒಡಲ ತಳಿಕೆ

ಯಾವುದನ್ನೆಲ್ಲಿಂದ ಬಿಡಿಸುವುದು
ತಿಳಿಯಲಾಗದ ತಿಳಿಯಬಾರದ
ಮಾಯಕವಿದು ಮಾರ್ಗಣವಿದು

ಅರ್ಥವೇ ಅನುಭವವು
ಅನುಭವವೇ ಕವಿತೆಯು ಆದಾಗ ಮಾತ್ರ ತಾನೆ
ಲೋಕದ ಜೊತೆಗೆ ಬೆಸುಗೆ?
ಹೊರಳು ನರಳು
ಚಿಮ್ಮು ನೆಮ್ಮು
ಉಡಿ ತುಡಿ
ಕ್ರಿಯೆಯೆಲ್ಲವೂ ಕೂಟವೇ!

ಎಲ್ಲ ಕವಿತೆಯ ಗಮ್ಯವೂ ಈ ಆಟವೇ